Rukmini

ಸಂಖ್ಯೆ: ಪೌನಿ:ಎಸ್.ಎ.ಎಸ್/35/2005-06

ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು, ದಿನಾಂಕ: 30-1-2006

## ಸುತ್ತೋಲೆ

**ವಿಷಯ: ಖಾತಾ ಬದಲಾವಣೆ ಶುಲ್ಕದ ಕುರಿತು**

- 0 -

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ 1964ನೇ ಕರ್ನಾಟಕ ಪುರಸಭೆಗಳ ಅಧಿನಿಯಮ ಕಲಂ 111, 112, 113 ರನ್ವಯ ಷೆಡ್ಯೂಲ್ 8 ಮತ್ತು 9 ರಂತೆ ಅಗತ್ಯ ಮಾಹಿತಿಯೊಂದಿಗೆ ಹಾಗೂ ಸೂಕ್ತ ದಾಖಲಾತಿಗಳೊಂದಿಗೆ ಆಸ್ತಿಗಳನ್ನು ಕ್ರಯಕ್ಕೆ ಪಡೆದವರು ಅಥವಾ ಖಾತೆದಾರರು ಮರಣ ಹೊಂದಿದ ಸಂದರ್ಭದಲ್ಲಿ ಅವರ ವಾರಸುದಾರರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಹಕ್ಕು ಬದಲಾವಣೆ ಶುಲ್ಕವನ್ನು ವಿವಿಧ ನಗರ ಸ್ಥಳೀಯ ಸಂಸ್ಥೆಗಳು ವಿವಿಧ ದರಗಳನ್ನು ನಿಗಧಿಪಡಿಸಿಕೊಳ್ಳುತ್ತಿರುವುದು ಈ ನಿರ್ದೇಶನಾಲಯದ ಗಮನಕ್ಕೆ ಬಂದಿರುತ್ತದೆ.

ಆದರೆ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ, ನಿಯಮಗಳಲ್ಲಿ ನಿರ್ದಿಷ್ಟ ಶುಲ್ಕವನ್ನು ವಸೂಲಿ ಮಾಡುವ ಬಗ್ಗೆ ಪ್ರಸ್ತಾಪ ಇಲ್ಲದೆ ಇರುವುದರಿಂದ ಈ ಕೆಳಕಂಡಂತೆ ಶುಲ್ಕವನ್ನು ವಿಧಿಸುವ ಬಗ್ಗೆ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ ಶುಲ್ಕವನ್ನು ವಸೂಲಾತಿ ಮಾಡಲು ನಿರ್ಣಯಿಸಿ ತೀರ್ಮಾನ ತೆಗೆದುಕೊಂಡು ಹಕ್ಕು ಬದಲಾವಣೆ ಶುಲ್ಕವನ್ನು ವಸೂಲಿ ಮಾಡಿ ಆಸ್ತಿ ವಹಿಯಲ್ಲಿ (ನಮೂನೆ - III) ನಮೂದಿಸಿ, ಅದರ ನಕಲನ್ನು ನೀಡಲು ಕ್ರಮ ತೆಗೆದುಕೊಳ್ಳುವುದು.

### 1. ಮಹಾನಗರಪಾಲಿಕೆಗಳಿಗೆ

| | | |
|---|---|---|
| 1 | ಸ್ಥಿರಾಸ್ಥಿ ಹಕ್ಕು ಬದಲಾವಣೆ | ಛಾಪಾ ಕಾಗದ ಬೆಲೆಯ ಮೇಲೆ ಶೇ. 2ರಷ್ಟು |
| 2 | ಮರಣದಿಂದ ಅಥವಾ ದಾನದಿಂದ ಹಕ್ಕು ಬದಲಾವಣೆ ಹಕ್ಕು | ಕನಿಷ್ಠ ರೂ.20/-ಕ್ಕೆ ಕಡಿಮೆ ಇಲ್ಲದಂತೆ ಆಸ್ತಿ ಮೌಲ್ಯದ ಪ್ರತಿ ರೂ.10,000/- ಗಳಿಗೆ ರೂ. 2/- ರಂತೆ |
| 3 | ಹಕ್ಕು ಬದಲಾವಣೆ ದೃಢೀಕರಣ ಪತ್ರದ ಶುಲ್ಕ | ರೂ. 25=00 |
| 4 | ಹಕ್ಕು ಬದಲಾವಣೆ ನಕಲು ಪ್ರತಿ ವಿತರಣೆ ಶುಲ್ಕ (ಎರಡನೇ ಸಲದ ಪ್ರತಿ) | ರೂ. 100=00 |

### 2. ನಗರಸಭೆಗಳಿಗೆ

| | | |
|---|---|---|
| 1 | ಸ್ಥಿರಾಸ್ಥಿ ಹಕ್ಕು ಬದಲಾವಣೆ | ಛಾಪಾ ಕಾಗದ ಬೆಲೆಯ ಮೇಲೆ ಶೇ. 1.5ರಷ್ಟು |
| 2 | ಮರಣದಿಂದ ಅಥವಾ ದಾನದಿಂದ ಹಕ್ಕು ಬದಲಾವಣೆ ಹಕ್ಕು | ಕನಿಷ್ಠ ರೂ.15/-ಕ್ಕೆ ಕಡಿಮೆ ಇಲ್ಲದಂತೆ ಆಸ್ತಿ ಮೌಲ್ಯದ ಪ್ರತಿ ರೂ.10,000/- ಗಳಿಗೆ ರೂ. 1.50 ರಂತೆ |
| 3 | ಹಕ್ಕು ಬದಲಾವಣೆ ದೃಢೀಕರಣ ಪತ್ರದ ಶುಲ್ಕ | ರೂ. 20=00 |
| 4 | ಹಕ್ಕು ಬದಲಾವಣೆ ನಕಲು ಪ್ರತಿ ವಿತರಣೆ ಶುಲ್ಕ (ಎರಡನೇ ಸಲದ ಪ್ರತಿ) | ರೂ. 75=00 |

1167
3/2/06

3. ಪುರಸಭೆ/ಪಟ್ಟಣ ಪಂಚಾಯಿತಿಗಳಿಗೆ

| | | |
|---|---|---|
| 1 | ಸ್ಥಿರಾಸ್ತಿ ಹಕ್ಕು ಬದಲಾವಣೆ | ಛಾಪಾ ಕಾಗದ ಬೆಲೆಯ ಮೇಲೆ ಶೇ. 1ರಷ್ಟು |
| 2 | ಋಣದಿಂದ ಅಥವಾ ದಾನದಿಂದ ಹಕ್ಕು ಬದಲಾವಣೆ ಹಕ್ಕು | ಕನಿಷ್ಠ ರೂ.10/-ಕ್ಕೆ ಕಡಿಮೆ ಇಲ್ಲದಂತೆ ಆಸ್ತಿ ಮೌಲ್ಯದ ಪ್ರತಿ ರೂ.10,000/- ಗಳಿಗೆ ರೂ. 1/- ರಂತೆ |
| 3 | ಹಕ್ಕು ಬದಲಾವಣೆ ದೃಢೀಕರಣ ಪತ್ರದ ಶುಲ್ಕ | ರೂ. 15=00 |
| 4 | ಹಕ್ಕು ಬದಲಾವಣೆ ನಕಲು ಪ್ರತಿ ವಿತರಣೆ ಶುಲ್ಕ (ಎರಡನೇ ಸಲದ ಪ್ರತಿ) | ರೂ. 50=00 |

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಪ್ರತಿಯನ್ನು:

ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.